ಬಿಜಾಪುರದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸುವುದು.

ಳಳ್ಳಿ. ಶ್ರೀ ಸಿ. ಎಸ್. ನಾಡಗೌಡ (ಮುದ್ದೇಬಿಹಾಳ) —ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರದಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಯಾವುದಾದರೂ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೆ ?

ಆ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಕೆ.ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಸಚಿವರು).—

ಅ) ಇಲ್ಲ ಸ್ವಾಮಿ.

ಆ) ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಸಿ.ಎಸ್. ನಾಡಗೌಡ.—ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆ. ಅದರಲ್ಲೂ ಶೇಕಡ ೭೦ ಭಾಗ ಒಣ ಬೇಸಾಯ ಮಾಡುತ್ತಿರುವಂಥ ಪ್ರದೇಶ. ಅಲ್ಲದೆ ಬಿಜಾಪುರ ಜಿಲ್ಲೆಯ ಜನರ ಬೇಡಿಕೆ ಮೇರೆಗೆ, ನಮ್ಮ ರಾಜ್ಯಪಾಲರ ಅಡಳಿತ ಇದ್ದಾಗ ಈ ಒಂದು ಶಿಕ್ಷಣ ಸಂಸ್ಥೆಯಲ್ಲಿ ಅಗ್ರಿಕಲ್ಚರಲ್ ಕಾಲೇಜನ್ನು ಸ್ಟಾರ್ಟ್ ಮಾಡಬೇಕೆಂದು ಹೇಳಿ ಪ್ರಸ್ತಾವನೆಯನ್ನು ತಂದಿದ್ದೆವು. ಅದಾದನಂತರ ರಾಜ್ಯಪಾಲರು ಒನ್ ಮ್ಯಾನ್ ಕಮಿಟಿ ನೇಮಿಸಿದರು. ಈ ರಿಪೋರ್ಟ್ ಸಂಬಂಧದಲ್ಲಿ ಎಸ್. ವರದನ್ ಅವರನ್ನು ವಿಜಾಪುರಕ್ಕೆ ಕಳುಹಿಸಿ ಕೊಟ್ಟರು. ಅದಾದನಂತರ ಅವರು ವರದಿ ಸಲ್ಲಿಸಿದರು. ಬಿಜಾಪುರ ಜಿಲ್ಲೆಗೆ ಅಗ್ರಿಕಲ್ಚರಲ್ ಕಾಲೇಜ್ ಅತೀ ಅವಶ್ಯಕವಾಗಿದೆ. ಅಲ್ಲಿ ಈಗಾಗಲೇ ವೆಲ್ ಎಕ್ಯುಪ್ಡ್ ರೀಸರ್ಚ್ ಸೆಂಟರ್ ಕೂಡಾ ಇದೆ; ಅದರಿಂದ ಸರಕಾರಕ್ಕೆ ಹೆಚ್ಚಿನ ಭಾರ ಆಗುವುದಿಲ್ಲ ಎಂದು ಅವರು ಪ್ರಸ್ತಾವನೆಯನ್ನು ಸಲ್ಲಿಸಿದರು. ಅದಾದನಂತರ ಅಗ್ರಿಕಲ್ಚರಲ್ ಸೆಕ್ರೆಟರಿ ಕೃಷ್ಣ ಕುಮಾರ್‌ರವರೂ ಕೂಡಾ ಪೇಪರ್‌ಗೆ ಹೇಳಿಕೆ ಕೊಟ್ಟು ಬಿಜಾಪುರ ಜಿಲ್ಲೆಗೆ ನಾವು ಅಗ್ರಿಕಲ್ಚರಲ್ ಕಾಲೇಜು ಕೊಡುತ್ತೇವೆ ಎಂಬ ಮಾತನ್ನು ಹೇಳಿದರು. ಇವತ್ತಿನ ದಿವಸ ಸರಕಾರದ ಮುಂದೆ ಈ ಪ್ರಸ್ತಾವನೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೆ, ಮಾನ್ಯ ಮಂತ್ರಿಗಳು ಇಲ್ಲ ಎಂಬ ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಯಾವುದು ಸರಿ ಎನ್ನುವುದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ವರದನ್ ಅವರ ವಿಕಸದಸ್ಯ ಸಮಿತಿಯ ವರದಿಯಲ್ಲಿ ಬಿಜಾಪುರದ ಕೃಷಿ ಕಾಲೇಜಿನ ವಿಚಾರ ಪ್ರಸ್ತಾಪವಾಗಿದೆ. ಆದರೆ ರಾಷ್ಟ್ರಪತಿಗಳ ಆಳ್ವಿಕೆ ಕಾಲದಲ್ಲಿನ ಎಕ್ಸಿಕ್ಯುಟೀವ್ ಕಮಿಟಿಯವರು ಈ ಶಿಫಾರಸ್ಸುಗಳನ್ನು ಒಪ್ಪುತ್ತಾ, ''ಬಿಶಾಲನಗರದಲ್ಲಿರುವ ಕೃಷಿ ಸಂಶೋಧನಾ ಕೇಂದ್ರವನ್ನು ನಿರ್ದಿಷ್ಟವಾಗಿ ಅಭಿವೃದ್ಧಿಗೊಳಿಸಿ ಅಲ್ಲಿಯೇ ಒಂದು ಕೃಷಿ ಕಾಲೇಜನ್ನು ಸ್ಥಾಪಿಸಲು ದಿನಾಂಕ ೮-೧೧-೮೯ರಲ್ಲಿ ತೀರ್ಮಾನ ತೆಗೆದುಕೊಂಡಿದೆ''. ಹೀಗಾಗಿ ಬಿಜಾಪುರಕ್ಕೆ ಸ್ವಲ್ಪ ತೊಂದರೆಯಾಗಿದೆ. ಸರ್ಕಾರದಿಂದ ತೊಂದರೆಯಾಗಿಲ್ಲ, ಈ ತೀರ್ಮಾನದಿಂದ ಅವರಿಗೆ ಸ್ವಲ್ಪ ತೊಂದರೆಯಾಗಿದೆ. ಈಗ ಒಂದು ಕಾಲೇಜ್ ಎಂದು ಹೇಳಿದರೆ, ಕನಿಷ್ಟ ಕೋಟಿಗಟ್ಟಲೆ ಹಣವನ್ನು ನಾವು ಖರ್ಚು ಮಾಡಬೇಕಾದ ಪರಿಸ್ಥಿತಿ ಬರುತ್ತದೆ, ಮುಂದೆ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಅನುಕೂಲ ಆದಾಗ ಬಿಜಾಪುರದ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಸಿ ಎಸ್. ನಾಡಗೌಡ.—ಈಗಾಗಲೇ ಅಲ್ಲಿ ರೀಸರ್ಚ್ ಸೆಂಟರ್ ಕೂಡ ಇದೆ, ಬಿಲ್ಡಿಂಗ್ ಇದೆ, ಸ್ಟಾಫ್ ಇದೆ. ಲ್ಯಾಂಡ್ ಇದೆ, ತೊಂದರೆ ಏನು ? ಬಿಜಾಪುರದ ಪ್ರಶ್ನೆ ಬಂದಾಗ ಸರಕಾರಕ್ಕೆ ಬಹಳ ಭಾರವಾಗುತ್ತದೆ ಎಂದು ಹೇಳುವುದು, ಸರಿಯಲ್ಲ. ಬಿಜಾಪುರಕ್ಕೆ ಏತಕ್ಕೆ ಈ ಮಲತಾಯಿಧೋರಣೆ ಎಂದು ಪ್ರಶ್ನೆ ಮಾಡಬೇಕಾಗುತ್ತದೆ ಬಿಜಾಪುರಕ್ಕೆ ಮೆಡಿಕಲ್ ಕಾಲೇಜ್ ಕೊಡುವಾಗ ಕೂಡಾ ಬಹಳ ಹಿಂದಗಡೆ ಕೊಟ್ಟಿದ್ದು ಈಗ ಅಗ್ರಿಕಲ್ಚರಲ್ ಕಾಲೇಜ್ ಕೊಡಬೇಕಾದರೂ ಕೂಡ ಏತಕ್ಕೆ ಈ ಧೋರಣೆ. ಎಲ್ಲಾ ಇದೆ, ತಾವು ಅದನ್ನು ಸರಿಯಾಗಿ ನೋಡಿ. ಎಲ್ಲ ರೀತಿ ಸೆಟಪ್ ಮಾಡಲಿಕ್ಕೆ ಬಹಳ ಎಂದರೆ ೫ ಕೋಟಿ ರೂಪಾಯಿ ಸರಕಾರದ ಮೇಲೆ ಭಾರ ಬರಬಹುದು. ಇದು ಅಷ್ಟೊಂದು ದೊಡ್ಡ ಪ್ರಮಾಣವಾದ ವಿಷಯವೋ, ಹೆಚ್ಚೇ ಪ್ರಮುಖವಾದ ವಿಷಯವೋ ಅಥವಾ ಒಂದು ಕಾಲೇಜನ್ನು ಚಾಲೂ ಮಾಡುವುದು ಪ್ರಮುಖವಾದ ವಿಷಯವೋ ಎಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಅಕ್ಷರತಕ್ಕಂಥ ರೀಪೋರ್ಟ್ ಸ್ಟೇಷನ್‌ನ್ನು ಬಲ ಪಡಿಸೋಣ. ತದನಂತರ ಕೃಷಿ ಕಾಲೇಜು ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದಕ್ಕೆ ಮುಂದಿನ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಮುಂದೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದು.

ಶ್ರೀ ಎಂ.ಎಸ್. ಆತ್ಮಾನಂದ.—ಅಧ್ಯಕ್ಷರೇ, ಈ ವರದನ್ ಸಮಿತಿ ಯಾವ ಯಾವ ಜಿಲ್ಲೆಗಳಲ್ಲಿ ಕೃಷಿ ಕಾಲೇಜಿಗೆ ಬೇಡಿಕೆ ಇದ್ದುದರ ಬಗ್ಗೆ ಸೂಕ್ತ ಶಿಫಾರಸ್ಸು ಮಾಡಿದೆ ಎಂದು ನಾನು ತಿಳಿಯಬಯಸುತ್ತೇನೆ. ಕಾರಣ ಇಷ್ಟೇ, ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸಹ ಒಂದು ಉತ್ತಮವಾದ ಇಂಡೋ ಜಾಪನೀಸ್ ಸಂಶೋಧನಾ ಕೇಂದ್ರ ಇದೆ ಹಾಗೂ ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ಫಾರಂ ಇದೆ. ಅಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸಬೇಕೆಂದು ಕಳೆದ ೨೦-೨೫ ವರ್ಷದಿಂದ ಬೇಡಿಕೆ ಇದೆ ಈ ಬಗ್ಗೆ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಕೇಳ ಬಯಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಈಗಾಗಲೇ ನಾನು ಮಾನ್ಯ ಈಶ್ವರಪ್ಪನವರ ಪ್ರಶ್ನೆಗೆ ಉತ್ತರ ಹೇಳುತ್ತಾ ಹೇಳಿದೆ, ವರದನ್‌ರವರ ವರದಿಯಲ್ಲಿ ಮಂಡ್ಯ ಮತ್ತು ಶಿವಮೊಗ್ಗ ಎರಡೂ ಇದೆ. ಇದರ ಬಗ್ಗೆ ನಾನು ಒಹಳ ಮಟ್ಟಿಗೆ ಸ್ವಲ್ಪ ದಿವಸದಲ್ಲಿಯೇ ತೀರ್ಮಾನ ತೆಗೆದುಕೊಳ್ಳುತ್ತೇನೆ.

(ಪ್ರಶ್ನೆ ೮೭೭ (೪೪೩) ಮಾನ್ಯ ಸದಸ್ಯರಾದ ಶ್ರೀ ಕೆ.ಹೆಚ್. ಹನುಮೇಗೌಡ ಅವರು ಗೈರು ಹಾಜರಾಗಿದ್ದರು)

ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆಯ ಬಗ್ಗೆ

೪೫೩. ಶ್ರೀ ಕೆ. ಸೋಮಪ್ಪ (ಮೂಡಬಿದ್ರೆ).— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅನುದಾನ ರಹಿತ ವಿದ್ಯಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

ಆ) ಈ ಅಧ್ಯಾಪಕರುಗಳಿಗೆ ಪಿಂಚಣಿ ಸೌಲಭ್ಯ ಗ್ರಾಚ್ಯುಟಿ, ಪ್ರಾವಿಡೆಂಟ್ ಫಂಡಿನ ಸೌಲಭ್ಯ ವಿದೆಯೇ ಇಲ್ಲದಿದ್ದಲ್ಲಿ ಈ ಬಗ್ಗೆ ಸರಕಾರದವರ ನಿಲುವೇನು ?

ಶ್ರೀ ಕೆ. ಹೆಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಅನುದಾನ ಸಂಹಿತೆ ನಿಯಮದಲ್ಲಿ ಅನುದಾನ ರಹಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರ ಕೆಲಸದ ಭದ್ರತೆ ನೀಡುವ ಬಗ್ಗೆ ಯಾವುದೇ ಅವಕಾಶವಿಲ್ಲ.

ಆ) ಅಸ್ತಿತ್ವದಲ್ಲಿರುವ ನಿಯಮಗಳ ಪ್ರಕಾರ ಈ ಸೌಲಭ್ಯಗಳು ಇರುವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).— ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಹತ್ತನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಲಾ ಕಾಲೇಜ್ ವೇತನ ಜಾರಿ ತಾರತಮ್ಯ

೪೪೧. ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ).— ಮಾನ್ಯ ವ್ಯವಸಾಯ ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೭೪-೭೫ರ ಈಚೆಗೆ ಪ್ರಾರಂಭವಾದ ಹಾಸನದ ಎಂ. ಕೃಷ್ಣ ಲಾ ಕಾಲೇಜು, ಸಿರ್ಸಿಯ ಎಂ.ಇ.ಎಸ್.ಲಾ ಕಾಲೇಜು ಮತ್ತು ಗುಲ್ಬರ್ಗದ ಸಿದ್ಧಾರ್ಥ ಲಾ ಕಾಲೇಜುಗಳಿಗೆ ಸರ್ಕಾರವು ನೇರ ವೇತನ ಪದ್ಧತಿಯನ್ನು ಜಾರಿಗೊಳಿಸಿದೆಯೆ ?

ಆ) ಈ ಸೌಲಭ್ಯವನ್ನು ೧೯೬೬ರಲ್ಲಿ ಪ್ರಾರಂಭಿಸಿದ ಶಿವಮೊಗ್ಗದ ರಾಷ್ಟ್ರೀಯ ಕಾನೂನು ಕಾಲೇಜಿಗೆ ಅನ್ವಯಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ಕೆ.ಹೆಚ್. ರಂಗನಾಥ್. (ವ್ಯವಸಾಯ ತೋಟಗಾರಿಕೆ. ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು).—

ಅ) 'ಅ'ದಲ್ಲಿ ಹೇಳಿರುವ ಮೂರು ಕಾನೂನು ಕಾಲೇಜುಗಳನ್ನು ಅನುದಾನ ಸಂಹಿತೆಗೆ ಒಳಪಡಿಸಲಾಗಿದೆ.